FOODGRAINS ALLOTMENT TO FAMINE AFFECTED DISTRICTS

233. Sri P. P. HEGRE (Chikodi).—

Will the Minister for Food and Forests be pleased to state :—

(*a*) the quantity of foodgrains of all kinds allotted every month to the famine affected districts in the State from 1st January 1973 to 31st December 1973 with districtwise break-up ;

(*b*) the basis on which these allotments were made ?

SRI K. H. PATIL (Minister for Food and Forests).—

(*a*) *Vide* Statement 'A' placed on the Table of the House.

(*b*) The allotments were made on the basis of requirements keeping in view the allocation of foodgrains from Central Government and availability of locally procured stocks.

ಶ್ರೀ ಪಿ. ಪಿ. ಹೆಗರೆ.—ಸರಕಾರ ನಮ್ಮ ಕಡೆಗೆ ಕೊಟ್ಟಿರುವ ಪಟ್ಟಿ ನೋಡಿದರೆ ಇದರಲ್ಲಿ ಬೆಳಗಾಂ ಜಿಲ್ಲೆಗೆ ಹಂಚಿಕೆ ಮಾಡಿರುವುದು ಸರಿಯಾಗಿಲ್ಲ ಎಂದು ಕಾಣುತ್ತೆ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ? ಬೆಳಗಾಂ ಜಿಲ್ಲೆ ಬರಗಾಲದ ಜಿಲ್ಲೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ ? ಇದಕ್ಕೆ ತಕ್ಕಂತೆ ಇಲ್ಲಿ ಆಹಾರಧಾನ್ಯ ಏಕೆ ಹಂಚಿಕೆಯಾಗುತ್ತಿಲ್ಲ ?

† ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಕಲ್ಪನಾ ಲೋಕದಲ್ಲಿರುವಂತೆ ಇಲ್ಲಿ ಹಂಚಿಕೆ ಮಾಡಲು ಸಾಧ್ಯವಿಲ್ಲ. ಇಲ್ಲಿನ ಅವಶ್ಯಕತೆಗಳನ್ನು ನೋಡಿ ಸಾಕಷ್ಟು ಧಾನ್ಯಗಳನ್ನು ಹಂಚುವ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಪಿ. ಪಿ. ಹೆಗರೆ.—ಬೆಳಗಾಂ ಜಿಲ್ಲೆ ಬರಗಾಲದ ಜಿಲ್ಲೆ ಎಂದಾಗಿದ್ದರೂ ಇತರೆ ಬರಗಾಲದ ಜಿಲ್ಲೆಗಳಿಗೆ ಹೆಚ್ಚು ದವಸ ಕಳುಹಿಸಿ ಇಲ್ಲಿಗೆ ಕಡಿಮೆ ಹಂಚಿರುವುದು ಗಮನಕ್ಕೆ ಬಂದಿದೆಯೇ ? ಸರ ಕಾರಕ್ಕೆ ಬೆಳಗಾಂ ಬರಗಾಲಕ್ಕೆ ಸಿಕ್ಕಿರುವುದು ಸರಕಾರದ ಗಮನಕ್ಕೆ ಬರಲಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲಿನ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಸೂಕ್ತ ರೀತಿ ಯಲ್ಲಿ ಎಲ್ಲ ತಾಲ್ಲೂಕುಗಳಿಗೂ ಹಂಚಬೇಕೆಂದು ಸೂಚನೆ ಕೊಡಲಾಗಿದೆ. ಇಲ್ಲಿನ ಜನಕ್ಕೆ ಆಹಾರ ಧಾನ್ಯ ಸಿಕ್ಕಿರುವುದರಿಂದ ಇವರು ಸಂತೃಪ್ತರಾಗಿದ್ದಾರೆನ್ನುವುದು ಸರಕಾರಕ್ಕೆ ಗೊತ್ತಿದೆ.

ಶ್ರೀ ಪಿ. ಪಿ. ಹೆಗರೆ.—ಆಹಾರ ಧಾನ್ಯಗಳು ಸಿಕ್ಕಿದೆ ಎಂದು ಮಂತ್ರಿಗಳು ಇಲ್ಲಿ ಹೇಳುತ್ತಿದ್ದಾರೆ. ಇಲ್ಲಿ ಕೂಲಿಮಾಡುವ ಜನರೇ ಹೆಚ್ಚಾಗಿರುವುದರಿಂದ ಇಲ್ಲಿನ ಜನರು ಕಂಗಾಲಾಗಿದ್ದಾರೆ. ಕಂಗಾಲಾಗಿರುವ ಇಂತಹ ಕೂಲಿಜನಕ್ಕೆ ಯೋಗ್ಯ ವ್ಯವಸ್ಥೆಮಾಡುವುದು ಸರಕಾರದ ಕರ್ತವ್ಯವಲ್ಲವೇ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಕಂಗಾಲಾಗಿರುವ ಜನರ ಸ್ಥಿತಿ ಸರಕಾರಕ್ಕೆ ಗೊತ್ತಿದೆ. ಹಾಗಿದ್ದರೂ ಸಾಕಷ್ಟು ಧಾನ್ಯ ಇಲ್ಲಿನ ಜನಕ್ಕೆ ಸಿಗುತ್ತಿದೆ. ಸಿಗ ದಿದ್ದರೆ ಇಲ್ಲಿನವರೆಗೆ ಅವರು ಉಳಿಯುತ್ತಿರಲಿಲ್ಲ. ಇದರಿಂದ ಎಲ್ಲರಿಗೂ ಆಹಾರಧಾನ್ಯ ಸಿಕ್ಕಿದೆ ಎನ್ನುವುದು ಸರಕಾರಕ್ಕೆ ಅರ್ಥವಾಗಿದೆ.

ಶ್ರೀ ಸಿ. ಟಿ. ಗುಡ್ಡಕಾಯು.—ನಮ್ಮ ಗೋಕಾಕ ತಾಲ್ಲೂಕಿನಲ್ಲಿ ಹಾಗೂ ಬೆಳಗಾಂನಲ್ಲಿ ಕೂಲಿಕಾರ ಜನರೇ ಬಹಳವಾಗಿರುವುದರಿಂದ ಇಲ್ಲಿನ ಜನಕ್ಕೆ ಸಾಕಷ್ಟು ಆಹಾರಧಾನ್ಯ ಸಿಗುತ್ತಿಲ್ಲ. ಇಲ್ಲ ಲ್ಯಾಂಡುಲೆಸ್ಸು ಲೇಬರರುಗಳೇ ಹೆಚ್ಚಾಗಿರುತ್ತಾರೆ ಎನ್ನುವದು ಸರಕಾರದ ಗಮನಕ್ಕೆ ಬಂದಿಲ್ಲವೇ ? ಇಡೀ ನಮ್ಮ ರಾಜ್ಯದಲ್ಲಿ ಬರಗಾಲಕ್ಕೆ ಮೊದಲನೇ ನಂಬರು ನಮ್ಮ ಬೆಳಗಾಂ ಜಿಲ್ಲೆಗೆ ಬಂದಿದೆ. ಹೀಗಿದ್ದರೂ ಸರಕಾರ ಈ ಜಿಲ್ಲೆ ಬಗ್ಗೆ ಏಕೆ ಮಲತಾಯಿ ಧೋರಣೆ ತೋರುತ್ತಿದ್ದಾರೆ ? ಇದಕ್ಕಾಗಿ ನಾನು ಮನವಿ ಮಾಡುವುದು ಇಲ್ಲಿ ಜನತೆಗೆ ಸಾಕಷ್ಟು ಹಂಚಿಕೆ ವ್ಯವಸ್ಥೆ ಸರಿಮಾಡಿ ದವಸ ಹಂಚುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಬೆಳಗಾಂ ಜಿಲ್ಲೆಮಟ್ಟಿಗೆ ಮಲತಾಯಿ ಧೋರಣೆ ತೋರ ಬೇಕೆಂದೇನೂ ಇಲ್ಲ. ಎಲ್ಲ ಜಿಲ್ಲೆಗಳೂ ಬರಗಾಲದಲ್ಲಿ ಒಂದೇ ರೀತಿಯಾಗಿವೆ ಎನ್ನುವುದು ಗೊತ್ತು. ಉದಾಹರಣೆಗೆ ಹೇಳಬೇಕಾದರೆ ಬರಗಾಲದ ಜಿಲ್ಲೆಯಾದ ಧಾರವಾಡಕ್ಕೆ 10,000 ಚೀಲಗಳನ್ನು ಕಳುಹಿಸಿದರೆ ಬೆಳಗಾಂ ಜಿಲ್ಲೆಗೆ 15,000 ಚೀಲ ಧಾನ್ಯವನ್ನು ಕಳಿಸಲಾಗಿದೆ. ಇದನ್ನು ನೋಡಿದರೆ ಹಂಚಿಕೆ ಹೇಗಿದೆ ಎನ್ನುವುದು ತಿಳಿಯುತ್ತೆ. ಗುಲ್ಬರ್ಗಾಕ್ಕೆ ಹೆಚ್ಚಾಗಿ ಕೂಡ ಹಂಚಿಕೆ ಮಾಡಲಾಗಿ ವುದಿಲ್ಲ. ಎಷ್ಟು ದವಸ ಬರುತ್ತದೋ ಅದರಂತೆ ಮತ್ತು ಸಂಗ್ರಹಣೆಯಾಗಿರುವ ದವಸ ನೋಡಿ ಕೊಂಡು ಹಂಚಬೇಕಾಗುತ್ತದೆ.

ಶ್ರೀ ಪಿ. ಪಿ. ಹೆಗಡೆ. - ಆಹಾರಧಾನ್ಯ ಸರಿಯಾಗಿ ಹಂಚಿಕೆಯಾಗಿದೆ, ಇದರಿಂದ ಇಲ್ಲಿನ ಜನರು ತೃಪ್ತರಾಗಿದ್ದಾರೆಂದು ಮಂತ್ರಿಗಳು ಹೇಳಿದರು. ನಾನು ಪ್ರತಿ ಹಳ್ಳಿ ಹಳ್ಳಿಗೂ ಹೋಗಿ ಸ್ವತಃ ನೋಡಿ ಬಂದಿದ್ದೇನೆ ಇಲ್ಲಿನ ಕೂಲಿ ಜನ ಒಂದು ಕಾಳು ಗೋಧಿ ಕೂಡ ಸಿಗಲಿಲ್ಲ, ಕಳೆದ ಆರು ತಿಂಗಳಿಂದ ಎನ್ನುತ್ತಾರೆ. ಇದರ ಬಗ್ಗೆ ನಾನೇ ತಹಶೀಲುದಾರರಿಗೆ ಹಾಗೂ ಕಲೆಕ್ಟರಿಗೆ ದೂರು ಕೊಟ್ಟರೂ ಅವರು ನಮಗೆ ಸ್ಪಾಕು ಬಂದಿಲ್ಲ. ನಮ್ಮಲ್ಲಿ ದೂರು ಕೊಡಬೇಡಿ. ಸರಕಾರಕ್ಕೆ ದೂರು ಕೊಟ್ಟು ಅವರಿಂದ ತರಿಸಿಕೊಟ್ಟರೆ ಹಂಚಬಹುದು ಎನ್ನುತ್ತಾರೆ. ಇದರ ಬಗ್ಗೆ ಸರಕಾರ ತೀವ್ರ ವಾದ ಕ್ರಮ ತೆಗೆದುಕೊಂಡು ಹಂಚುತ್ತಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಗೋಧಿ ವಿಚಾರದಲ್ಲಿ ಬೇಳುತ್ತಿದ್ದಾರೆ. ಗೋಧಿ ನಮ್ಮ ರಾಜ್ಯದಲ್ಲಿ ಬೆಳೆಯುವುದಿಲ್ಲ. ಕೇಂದ್ರದವರಿಂದ ಎಷ್ಟು ಬರುತ್ತದೊ, ಅದರಂತೆ ಹಂಚಿಕೆ ಮಾಡಬೇಕು.

ನಮ್ಮ ರಾಜ್ಯದಲ್ಲಿರುವ ಮೂರು ಕೋಟಿ ಜನಕ್ಕೆ ಗೋಧಿಯನ್ನು ಹಂಚಬೇಕಾದರೆ ಒಂದು ಕೆ.ಜಿ. ಎಂದರೂ ಸುಮಾರು 30 ಲಕ್ಷ ಟನ್ ಬೇಕಾಗುತ್ತದೆ. ಆದರೆ ನಮಗೆ ಬರುತ್ತಿರುವುದು ಕೇವಲ ಒಂಬತ್ತು ಸಾವಿರ ಟನ್ನುಗಳು. ಇದರಲ್ಲಿ ಐದು ಸಾವಿರ ಟನ್ ಮಾತ್ರ ಹಂಚಿಕೆಗೆ ಬರುತ್ತದೆ. ಉಳಿದ ನಾಲ್ಕು ಸಾವಿರ ಟನ್ನುಗಳು ಮಿಲ್ಲುಗಳಿಗೆ ಹೋಗುತ್ತವೆ. ಇದರಿಂದ ಗೋಧಿಯನ್ನು ಎಲ್ಲರಿಗೂ ಹಂಚಲು ಸಾಧ್ಯವಾಗುವುದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಗಮನದಲ್ಲಿಡಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಪ್ರಶ್ನೆ (57) ತಡೆ ಹಿಡಿಯಲಾಗಿದೆ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

CALLING ATTENTION TO A MATTER OF URGENT PUBLIC IMPORTANCE.

Re : *Withdrawing cases against students in connection with disturbances at Hassan during* 1973.

SRI K. H. HANUME GOWDA (Hassan).—I call the attention of the Chief Minister to the withdrawal of cases filed against the students in connection with last years' disturbances Hassan *i.e.*, during 1973.

Sri K. H. PATIL (Minister for Food and Forests).—Sir, In reply to the above calling attention notice I state as follows :

292 cases have been registered by the police against students among others in connection with the disturbances which took place in 1973.

On 11th September 1973, 19 students belonging to various colleges of the Bangalore University restored to vandalism by pelting stones and causing damage to public property and injuries to